**ಮಂಗಳೂರು ವಿಶ್ವವಿದ್ಯಾನಿಲಯ**

**ದೂರ ಶಿಕ್ಷಣ ಕೇಂದ್ರ**

**<u>ಕನ್ನಡದಲ್ಲಿ ಉತ್ತರಿಸುವ ವಿದ್ಯಾರ್ಥಿಗಳ ಗಮನಕ್ಕಾಗಿ.</u>**

ದಿನಾಂಕ : 13.07.2017

ಸಂಖ್ಯೆ:ಮವಿ/ದೂ.ಶಿ.ಕೇ./24/2017-18/ಡಿ1

ಇವರಿಗೆ,

2017-18ನೇ ಸಾಲಿನ ಪ್ರಥಮ ಬಿ.ಎ./ಪ್ರಥಮ ಬಿ.ಕಾಂ./ಪ್ರಥಮ ಬಿ.ಬಿ.ಎ. ವಿದ್ಯಾರ್ಥಿಗಳು.

ಮಾನ್ಯರೇ,

<u>ವಿಷಯ: ಪ್ರತಿ ವಿಷಯ/ಪತ್ರಿಕೆಯಲ್ಲಿ ಎರಡು ಅಸ್ಶೈನ್‌ಮೆಂಟ್‌ಗಳನ್ನು ಸಲ್ಲಿಸುವ ಕುರಿತು.</u>

ಮಂಗಳೂರು ವಿಶ್ವವಿದ್ಯಾನಿಲಯದ ದೂರ ಶಿಕ್ಷಣ ಕೇಂದ್ರದ ವಿದ್ಯಾರ್ಥಿಯಾಗಿ ತಾವು ಸೇರ್ಪಡೆಯಾಗಿರುವುದು ಸಂತೋಷದ ವಿಷಯ. ಈಗಾಗಲೇ ತಮಗೆ ನೀಡಲಾದ ವಿವರಣಾ ಪುಸ್ತಕವನ್ನು ಓದಿಕೊಂಡಿದ್ದೀರಿ ಎಂದು ಭಾವಿಸಿದ್ದೇನೆ. ವಿಶ್ವವಿದ್ಯಾನಿಲಯ ನೀಡುವ ಹೊಸ ವಿಧಾನದ ಶಿಕ್ಷಣವನ್ನು ಹೇಗೆ ಗ್ರಹಿಸಬೇಕು ಎಂಬ ಸ್ಪಷ್ಟ ಕಲ್ಪನೆ ತಮಗೆ ಈಗ ಮೂಡಿರಬಹುದು. ತಮಗೆ ನೀಡಲಾದ ಅಧ್ಯಯನ ಸಾಮಗ್ರಿಗಳೊಂದಿಗೆ ಸಂಬಂಧಪಟ್ಟ ಪಠ್ಯಪುಸ್ತಕಗಳನ್ನು ಅಧ್ಯಯನ ಮಾಡುವುದು ಅಗತ್ಯವಾಗಿದೆ. ಜೊತೆಗೆ ಅಧ್ಯಯನ ದೃಷ್ಟಿಯಿಂದ ಸಂಪರ್ಕ ಕಾರ್ಯಕ್ರಮಗಳಿಗೆ ಹಾಜರಾಗುವುದೂ ಮುಖ್ಯ. ಇದರ ವೇಳಾಪಟ್ಟಿಯನ್ನು ಮುಂದಕ್ಕೆ ತಮಗೆ ಕಳುಹಿಸಿಕೊಡಲಾಗುವುದು. ದೂರ ಶಿಕ್ಷಣ ಕೇಂದ್ರದ ವಿದ್ಯಾರ್ಥಿಯಾದ ತಮಗೆ ಬೋಧನೆ, ಕಲಿಕೆಯ ಪ್ರಕ್ರಿಯೆಯಲ್ಲಿ ಇತರ ಎಲ್ಲ ಅಂಶಗಳೊಡನೆ, ಕಡ್ಡಾಯವಾದ ಅಸ್ಶೈನ್‌ಮೆಂಟ್‌ಗಳು ಒಂದು ಅವಿಭಾಜ್ಯ ಭಾಗ ಎಂದು ವಿವರಣಾಪುಸ್ತಕದ ಮೂಲಕ ಗೊತ್ತಾಗಿರಬಹುದು. ಅಸ್ಶೈನ್‌ಮೆಂಟ್‌ಗಳನ್ನು ಸಲ್ಲಿಸಲು ಇರುವ ಎಲ್ಲ ನಿರ್ದೇಶನಗಳನ್ನು ದಯವಿಟ್ಟು ಮನದಟ್ಟು ಮಾಡಿಕೊಳ್ಳಬೇಕೆಂದು ಕೋರುತ್ತೇನೆ. ಇವುಗಳಿಗೆ ಉತ್ತರಿಸುವುದರ ಮೂಲಕ ಕಲಿಕೆಯ ವಿಧಾನ ಸ್ಪಷ್ಟಗೊಳ್ಳುತ್ತದೆ ಎಂಬ ಮಹತ್ವದ ಅಂಶವನ್ನು ತಾವು ಗ್ರಹಿಸಬೇಕಾಗಿದೆ.

ಆದ್ದರಿಂದ ಈ ಪತ್ರದೊಂದಿಗೆ ತಮ್ಮ ಕೋರ್ಸಿಗೆ ಸಂಬಂಧಿಸಿದ ಅಸ್ಶೈನ್‌ಮೆಂಟ್ ವಿಷಯಗಳ ಪಟ್ಟಿಯನ್ನು ಲಗತ್ತಿಸಲಾಗಿದೆ. ತಾವು ಅಧ್ಯಯನ ಮಾಡುತ್ತಿರುವ ಶಿಕ್ಷಣದ ವಿಷಯ/ಪತ್ರಿಕೆಯಲ್ಲಿ ಎರಡೂ ಅಸ್ಶೈನ್‌ಮೆಂಟ್‌ಗಳನ್ನು ಬರೆಯತಕ್ಕದ್ದು. ಪ್ರತೀ ಅಸ್ಶೈನ್‌ಮೆಂಟ್‌ಗೆ ಹತ್ತು ಅಂಕಗಳನ್ನು ಮೀಸಲಾಗಿರಿಸಲಾಗಿದೆ.

ಅಸ್ಶೈನ್‌ಮೆಂಟ್‌ಗಳ ಕಾರ್ಯವನ್ನು ಕೈಗೆತ್ತಿಕೊಳ್ಳುವ ಮೊದಲು ಈ ಕೆಳಗಿನ ಅಂಶಗಳನ್ನು ದಯವಿಟ್ಟು ಗಮನಿಸಬೇಕೆಂದು ಕೋರಲಾಗಿದೆ.

೧. ಬರವಣಿಗೆಯು ನಿಖರವೂ ತರ್ಕಬದ್ಧವೂ ಆಗಿರಬೇಕು.

೨. ಸರಳವಾದ ಶುದ್ಧ ಕನ್ನಡದಲ್ಲಿರಬೇಕು.

೩. ಸ್ಪಷ್ಟವಾಗಿ ಓದಲು ಯೋಗ್ಯ ಬರಹದಲ್ಲಿರಬೇಕು.

ವರ್ಷಾಂತ್ಯದ ಪರೀಕ್ಷೆಗಳ ಮೊದಲು ಅಸ್ಶೈನ್‌ಮೆಂಟ್‌ಗಳನ್ನು ಸಲ್ಲಿಸಬೇಕಾದದ್ದು ಅಗತ್ಯವಾಗಿದೆ. ತಾವು ಕಳುಹಿಸುವ ಅಸ್ಶೈನ್‌ಮೆಂಟ್‌ಗಳ ಪ್ರತಿಗಳನ್ನು ತಮ್ಮ ಬಳಿ ಇಟ್ಟುಕೊಳ್ಳತಕ್ಕದ್ದು.

**ಸೂಚನೆಗಳು:**

1. ವಿದ್ಯಾರ್ಥಿಗಳು ಪ್ರತಿ ವಿಷಯದಲ್ಲಿ/ಪತ್ರಿಕೆಯಲ್ಲಿ ಎರಡು ಅಸ್ಶೈನ್‌ಮೆಂಟ್‌ಗಳನ್ನು ಸಲ್ಲಿಸತಕ್ಕದ್ದು.
2. ಅಸ್ಶೈನ್‌ಮೆಂಟ್‌ಗಳಿಗೆ 20 ಅಂಕಗಳು ಹಾಗೂ ವಾರ್ಷಿಕ ಪರೀಕ್ಷೆಗಳಿಗೆ 80 ಅಂಕಗಳನ್ನು ನಿಗದಿಪಡಿಸಲಾಗಿದೆ.
3. ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆಗಳಿಗೆ ಹಾಜರಿ/ಗೈರುಹಾಜರಿಯಾಗುವುದನ್ನು ಪರಿಗಣಿಸದೆ ಅಸ್ಶೈನ್‌ಮೆಂಟ್‌ಗಳನ್ನು ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿಯೇ ಸಲ್ಲಿಸತಕ್ಕದ್ದು.
4. ವಿದ್ಯಾರ್ಥಿಗಳು ಪ್ರತಿ ಅಸ್ಶೈನ್‌ಮೆಂಟ್‌ನಲ್ಲಿ ಕನಿಷ್ಠ ಅಂಕಗಳನ್ನು ಪಡೆದ ನಂತರ ಮತ್ತೆ ಉತ್ತಮೀಕರಣಕ್ಕೆ ಅವಕಾಶವಿರುವುದಿಲ್ಲ ಮತ್ತು ಈ ಅಂಕಗಳನ್ನೇ ಮರುಪರೀಕ್ಷೆ ತೆಗೆದುಕೊಂಡ ಸಂದರ್ಭಗಳಲ್ಲಿಯೂ ಉಳಿಸಿಕೊಳ್ಳಲಾಗುವುದು.
5. ನಿಗದಿತ ದಿನಾಂಕದೊಳಗೆ ಅಸ್ಶೈನ್‌ಮೆಂಟ್‌ಗಳನ್ನು ಸಲ್ಲಿಸದ ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆಗೆ ಹಾಜರಾಗಬಹುದು. ಆದರೆ ಅಂಕಪಟ್ಟಿಯಲ್ಲಿ ಎನ್.ಎಸ್.ಎ (Not submitted Assignment) ಎಂದು ಘೋಷಿಸಲಾಗುವುದು.
6. ಕನ್ನಡ ಮಾಧ್ಯಮದಲ್ಲಿ ಉತ್ತರಿಸುವ ವಿದ್ಯಾರ್ಥಿಗಳು ಇಂಗ್ಲೀಷ್ ಭಾಷೆಯಲ್ಲಿರುವ ವಿಷಯಗಳನ್ನು ಸ್ವತಃ ಮನದಟ್ಟುಮಾಡಿಕೊಂಡು ಕನ್ನಡದಲ್ಲಿಯೇ ಉತ್ತರಿಸಬಹುದಾಗಿದೆ.
7. ಅಸ್ಶೈನ್‌ಮೆಂಟ್‌ಗಳನ್ನು ಬರೆಯಲು ಬಿಳಿ ಹಾಳೆಯನ್ನು ಬಳಸತಕ್ಕದ್ದು. ಪ್ರತಿ ವಿಷಯ/ಪತ್ರಿಕೆಯ ಪ್ರತಿಯೊಂದು ಅಸ್ಶೈನ್‌ಮೆಂಟ್‌ಗಳನ್ನು ಉತ್ತರಿಸಲು ಪ್ರತ್ಯೇಕ ಹಾಳೆಯನ್ನು ಉಪಯೋಗಿಸುವುದು.
8. **<u>ವಿದ್ಯಾರ್ಥಿಗಳು ಅಸ್ಶೈನ್‌ಮೆಂಟ್‌ಗಳನ್ನು ತಮ್ಮ ಸ್ವಂತ ಕೈ ಬರಹದಲ್ಲಿ ನೀಲಿ ಶಾಯಿಯಪೆನ್ನು ಉಪಯೋಗಿಸಿಕೊಂಡು ಬರೆಯತಕ್ಕದ್ದು.</u>**
9. ವಿದ್ಯಾರ್ಥಿಗಳು ತಮ್ಮ ಅಸ್ಶೈನ್‌ಮೆಂಟ್‌ನ ವಿವರಗಳನ್ನು ಲಗತ್ತಿಸಲಾದ ನಮೂನೆಯಲ್ಲಿ ಭರ್ತಿಮಾಡಿ ಕಳುಹಿಸತಕ್ಕದ್ದು.
10. <u>ವಿದ್ಯಾರ್ಥಿಗಳು ಎಲ್ಲಾ ಅಸ್ಶೈನ್‌ಮೆಂಟ್‌ಗಳನ್ನು ದಿನಾಂಕ 16.03.2018 (ಶುಕ್ರವಾರ) ರಿಂದ 30.03.2018 (ಶುಕ್ರವಾರ)ರ ಅವಧಿಯಲ್ಲಿ ಸಲ್ಲಿಸತಕ್ಕದ್ದು. ಆ ಬಳಿಕ ವಿದ್ಯಾರ್ಥಿಗಳು ದಿನವೊಂದಕ್ಕೆ ರೂ.200-00ರಂತೆ ದಂಡ ಶುಲ್ಕ ಪಾವತಿಸಿ ದಿನಾಂಕ 16.04.2018 (ಸೋಮವಾರ)ರವರೆಗೆ ಅಸ್ಶೈನ್‌ಮೆಂಟ್‌ಗಳನ್ನು ಸಲ್ಲಿಸಬಹುದಾಗಿದೆ. ಆದರೆ ದಿನಾಂಕ 16.04.2018ರ ಬಳಿಕ ಸ್ವೀಕೃತವಾಗುವ ಅಸ್ಶೈನ್‌ಮೆಂಟ್‌ಗಳನ್ನು ಯಾವುದೇ ಸಂದರ್ಭದಲ್ಲಿ ಪರಿಗಣಿಸಲಾಗುವುದಿಲ್ಲ.</u>
11. ಅಸ್ಶೈನ್‌ಮೆಂಟ್‌ಗಳನ್ನು ನಿರ್ದೇಶಕರು, ದೂರ ಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ವಾಣಿಜ್ಯ ಸಂಕೀರ್ಣ ಮಂಗಳಗಂಗೋತ್ರಿ – 574 199 ಇವರಿಗೆ ಸಲ್ಲಿಸತಕ್ಕದ್ದು.

ತಮ್ಮ ವಿಶ್ವಾಸಿ,

ನಿರ್ದೇಶಕರು

ವಿಶೇಷ ಸೂಚನೆ: ಅಧ್ಯಾಪಕರು ಶಿಫಾರಸು ಮಾಡಿರುವ ಸಂಬಂಧಪಟ್ಟ ಪುಸ್ತಕಗಳನ್ನು ಓದಿ ಅಸ್ಶೈನ್‌ಮೆಂಟ್‌ಗಳನ್ನು ಬರೆಯುವುದು.